375

ದೊಡ್ಡಬಳ್ಳಾಪುರ ತಾಲ್ಲೂಕು ತೂಬಗೆರೆ ಸ್ಟೇಷ್ಟ ಸರಹದ್ದು ಹಾಡೋನಹಳ್ಳಿಯಲ್ಲಿ ಇದ್ದ ಹನುಮಿ ಯುಂಬುವಳ ಚಹರೇಪಟ್ಟಿ.

ತಾರೀಖು 24ನೇ ಆಗಸ್ಟ್ 1896.

ಹೆಸರು ಹನುಮಿ, ಜಾತಿ ಮರಸುವಕ್ಕಲಿಗರು, ವಯಸ್ಸು 30—35 ಪರುಷ, ಎಣಗೆಂಪು, ಗುಂಡು ಮುಖ, ಹಣೇಮೇಲೆ (1) ಹಚ್ಚೆ ಇದೆ. ನೂಲಿನ ಕರಿಡೀರೆ, ಬಿಳೀರೇರೆ ಪುಡತಕ್ಕ ವಳು, ಇವಳಿಗೆ ಹಾಡೋನಹಳ್ಳಿ ಹನುಮಂತಣ್ಣನ ಮಗ ಮರಿಯಪ್ಪ ಖಾಸಾ ಅಣ್ಣನಾಗಬೇಕು. ಇವಳನ್ನ ಕಣವೇ ಕೆಳಗೆ ಬುಲ್ಲಹಳ್ಳಿಗೆ ಮದುವೆ ಆಗಿತ್ತು. ಇವಳ ಗಂಡನ ಹೆಸರು ಸುಬ್ಬಣ್ಣ, ಇವಳ ಫವತಿಯಾಗಿ ಧಾನೆ, ಜಾತಿ ಕೆಟ್ಟು ಹೋಗಿಧಾಳೆ, ಈಗ 6 ತಿಂಗಳ ಕೆಳಗೆ ಹಾಡೋನಹಳ್ಳಿಗೆ ಬಂದು ಹೋದವಳು ಪತ್ತೆ ಇಲ್ಲವೆಂದು ಹೇಳುತ್ತಾರೆ.

ಬಿ. ಕುಪ್ಪಸ್ವಾಮಿನಾಯಡು,
ಘಾರ್ ಡೆಪ್ಯುಟಿ ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಬಾಗೇಪಲ್ಲಿ ತಾಲ್ಲೂಕು ಕಚೇರಿಯಿಂದ.

ಇಸ್ತಿಹಾರ್‌ನಾಮೆ.

ತಾರೀಖು 18ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಗ್ರಾಮಾಂತ್ರಗಳಲ್ಲಿ ಯಿರುವ ಕುರಂಗದಕಲ್ಲು ೯೬—೯೭ನೇ ದುರ್ಮುಖಿ ಸಂವತ್ಸರಕ್ಕೆ ದಾಖಲಾಗತಕ್ಕದ್ದನ್ನ 1896ನೇ ಇಸವಿ ಮಾಹೆ ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುತ್ತೆ.

2. ಈ ಹರಾಜು ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್‌ದಾರ್ರವರು ಮಾಡಿಸುತ್ತಾರೆ.

3. ಇಜಾರೆಯು ಪ್ರತಿ ಸಾಲ್ ಜುಲೈ ಲಾಗಾಯುತು ಒಂದು ವರ್ಷದ ವರೆಗೆ ಯಿರತಕ್ಕದ್ದು.

4. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ಮಾಡುತ್ತಾರೋ ಅಥವಾ ಯಿತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಿ ಅವರಿಂದ ಪಡಕೊಂಡುಇರುವ ಅಧಿಕಾರಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿಸ್ಕರಿಸಲ್ಪಡುತ್ತೆ.

5. ಚಡಸವಾಲ್‌ದಾರನು ಹರಾಜುಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡಲೆ ಸವಾಲ್ ಮೊಬಲಗು ಪೈಕಿ ಕೇಕಡಾ 25ರೂ. ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನೂ ರೂಪಾಯಿ ಒಂದಕ್ಕೆ ವಂದಾಣೆ ಪ್ರಕಾರ ಆಗುವ ಲೋಕಲ್ ಸೆಸ್ಸ್ ಸಹಿತ ಹರಾಜ್ ಕಾಯಂ ಆದ ಸಂಗತಿ ಬರಹ ಮೂಲಕ ಅಮಲ್‌ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ದುಸರಾ ಹರಾಜ್ ಮಾಡಲ್ಪಟ್ಟು ಅದರಿಂದ ವುಂಟಾಗುವ ನಷ್ಟಕ್ಕೆ ಮೊದಲ್ ಸವಾಲ್‌ದಾರನನ್ನ ಗುರಿಮಾಡಲ್ಪಡುತ್ತೆ.

6. ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾಯ ಹಿಡುವಳಿದಾರನ ಅನುಮತಿ ವಿನಹ ಅರಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮೀಯಿಸಿಕೊಳ್ಳುವದಕ್ಕಾಲಿ ಅಥವಾ ಇಜಾರೆದಾರರಿಗೇ ವಿನಹ ಇತರರಿಗೆ ಮಾರುವದಕ್ಕಾಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

7. ಇಜಾರೆದಾರನು ಹುಲ್ಲುಬನ್ನಿ ಯಾ ಹುಲ್ಲುಕಾವಲ್ ಇಜಾರೆದಾರರ ಹಕ್ಕಿಗೆ ಆಟಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರ್ಕಾರದವರು ದರಖಾಸ್ತು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಯಿರುವದಿಲ್ಲ.

9. ಕಲ್ಲುಗಳನ್ನ ಜಮೀಯಿಸುವದಕ್ಕಾಗಿ ಜಮೀನುಗಳನ್ನ ಇಜಾರೆದಾರನು ಅಗಿಯಕೂಡದು. ಒಂದು ವೇಳೆ ಅಗದರೆ ಸಾಗು ವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಿಮಾಡಿಸಬೇಕು.

ಸಿ. ಮಾದಯ್ಯ,
ಡೆಪ್ಯುಟಿ ಕಮ್ಮಿಷನರ್.

ತುಮಕೂರ್ ಡಿಸ್ಟ್ರಿಕ್ಟು.

ತಾರೀಖು 31ನೇ ಆಗಸ್ಟ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸ್ ೧೮೯೬–೯೭ನೇ ಸಾಲಿಗೆ ಮದ್ದಗಿರಿ ತಾಲ್ಲೂಕು ಮತ್ತು ಕೊರ್ಟಗೆರೆ ಸಬ್ ತಾಲ್ಲೂಕಿನಲ್ಲಿ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಆಕಾರ ಕಂಡ ಫಡ್ ಜಮೀನುಗಳಲ್ಲಿಯೂ ಮತ್ತು ಅಮೃತಮಹಲ್ ಕಾವಲ್‌ಗಳಲ್ಲಿಯೂ ದೊರೆಯುವ ಪಸಾರೆ ಜಿನಸಿಗಳನ್ನು ಜಮೀಯಿಸಿಕೊಳ್ಳುವ ಹಕ್ಕು ದಾರಿಯನ್ನ 4—8—96 ಮತ್ತು 5—8—96ನೇ ತಾರೀಖುಗಳಲ್ಲಿ ಹರಾಜು ಮಾಡಿಸಲಾಗಿ ಕಂಸವಾಲ್ ಆದ್ದರಿಂದ ಸದರೀ ಹಕ್ಕು ದಾರಿಯನ್ನ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಪುನಃ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ನ 11 ಘಂಟೆಗೆ ಪುರುವಾಗುತ್ತೆ, ಹರಾಜು ತುಮಕೂರ್ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೆಬರವರ

ಮಂಜೂರಾತಿಗೆ ವಳಪಟ್ಟಿರುತ್ತೆ. ಮುದ್ದಗಿರಿ ತಾರೀಖು 29—9—96 ಮುದ್ದಗಿರಿ, ಕೊರ್ಟಗೆರೆ ತಾರೀಖು 30—9—96 ಕೊರ್ಟಗೆರೆ.

2. ಚಡದರಖಾಸ್ತುದಾರನು ಹರಾಜು ಕೈದಾದ ಕೂಡ್ಲೆ ಹರಾಜ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜ್ ಮಂಜೂರ್ಮಾಡಲ್ಪಟ್ಟ ಸಂಗತಿ ಆಮಲ್ದಾರ್ರಿಂದ ಚಡಸವಾಲ್ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜ್ ಮೊಬಲಗಿಗೆ ರೂಪಾಯಿ 1ಕ್ಕೆ 1 ಆಣೆಯಂತೆ ಲೋಕಲ್‌ಸೆಸ್ಸ್ ವಸೂಲ್ ಮಾಡಲ್ಪಡುವದು.

3. ಕ್ಲಿಪ್ತಕಾಲದ ವಳಗೇ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರರು ತೇವಣಾತಿ ಇಟ್ಟ ಮೊಬಲಗು ಸರಕಾರಕ್ಕೆ ಕೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನ ದರಖಾಸ್ತುದಾರನ ಲುಕ್‌ಸಾನಿಗೆ ವಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಆದರೆ ದುಸರೇ ಹರಾಜಿನಲ್ಲಿ ವುಂಟಾಗುವ ಘಾಯಿದೆಭಾಗ, ದರಖಾಸ್ತುದಾರರು ಹೊಂದಲು ಅರ್ಹರಾಗುವದಿಲ್ಲ.

4. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನ ರೂಢಿಸಕೂಡದು.

5. ಗಾಮು ಅಮರಾಯಿ ಫಲ ಹುಟ್ಟುನಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಆಡಗಿರುವದಿಲ್ಲ.

ಎಂ. ನಾರಾಯಣರಾವ್,
ಡಿಪ್ಯೂಟಿ ಕಮ್ಮಿಷನರ್.

ತುಮಕೂರ ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕ ಚನ್ನಶಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ್ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಚನ್ನಶಟ್ಟಿಹಳ್ಳಿ ಪ್ಲಾಂಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೊ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು ..	249	568	6	3
ಹಳೇ ಬಿದರುಗಳು ..	544			

ಗುಬ್ಬೀ ತಾಲ್ಲೂಕು ಚನ್ನಶಟ್ಟಿಹಳ್ಳಿ ಪ್ಲಾಂಟೇಷನ್.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು ..	1190			

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜುದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ್ ಕೈದಾದ ಕೂಡ್ಲೆ ಕಾಲುಹಿಸ್ಸೇ ಮೊಬಲಗು ತೇವಣಿ ತರೀಕ್ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜ್ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜ್‌ದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಖ್ಮೀಲುಗಳಿಗೆ 1895ನೇ ಇಸವಿ ಏಪ್ರೆಲ್ 25ನೇ ಮಾರ್ಕ್ಹಂ ಮೈಸೂರಿ ಗೆಜೆಟ್ 1ನೇ ಭಾಗದಲ್ಲಿ ಘಾಯಿಷ್ಹಾಗಿರುವ 1895ನೇ ಇಸವಿ ಮಾರ್ಚಿ 15ನೇ ಮಾರ್ಕ್ಹಂ 15229ನೇ ನಂಬರು ಗವರ್ನ್‌ಮೆಂಟ್ ನೋಟಿಫಿಕೇಷನ್ನೋಡಿ.

ತಾರೀಖು 9ನೇ ಸೆಪ್ಟಂಬರ್ 1896ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟ್ ಸ್ಪೇಟ್ ಫಾರೆಸ್ಟ್ಸುಗಳ ಬಾಬತು ಕಲ್ಲುಹುಪ್ಪು ಮತ್ತು ಅರಗು ಜಮಾಯಿಸಿಕೊಳ್ಳತಕ್ಕ ಹಕ್ಕನ್ನ 1896ನೇ ಇಸವಿ ಸೆಪ್ಟಂಬರ್ 4ನೇ ತಾರೀಖಿನಲ್ಲಿ ಹರಾಜು ಮಾಡಲಿಲ್ಲವಾದ ಪ್ರಯುಕ್ತ ಪುನಹ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಮೇಲೆ ನಮೂದಿಸಲ್ಪಟ್ಟಿರುವ ಜಿನಸಿಗಳ ಹರಾಜನ್ನು 1896ನೇ ಇಸವಿ ಆಗಸ್ಟ್ 15ನೇ ಮಾರ್ಕ್ಹಂ ಮೈಸೂರ ಗೆಜೆಟ್ 2ನೇ ಭಾಗ 753, 754ನೇ ಪುಟಗಳಲ್ಲಿ ಘಾಯಿಸಿರುವ ಷರತ್ತುಗಳನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಸಬ್ ಅಸಿಸ್ಟೆಂಟ್ ಕಂಸರ್ವೇಟರವರಿಂದಲಾಗಲಿ 1896ನೇ ಇಸವಿ ಅಕ್ಟೋಬರ್ ತಾರೀಖು 3ನೇ ದಿವಿ 12 ಘಂಟೆಯಲ್ಲಿ ಬಹಿರಂಗವಾಗಿ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸಿನಲ್ಲಿ ಹರಾಜ್ ಮಾಡಲ್ಪಡುತ್ತೆ.

ಯಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.